Regd No BG 155

Sri "SATYAVADI"
— DAILY —
MYSORE4
46 th Year

Protect the cow

— ೨೯ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

10—4—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಮಂಗಳೂರು ಬಂದರನು ಕೇಂದ್ರಕೆ ವಹಿಸಲು ಮೈಸೂರು ಸಿದ

ಮಂಗಳೂರು ಬಂದರನ್ನು ಭಾರತ ಸರ್ಕಾರಕ್ಕೆ ವಹಿಸಲು ಮೈಸೂರು ಸರ್ಕಾರ ಇಚ್ಛೆಪಟ್ಟಿರುವುದಾಗಿ ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ಬೆಂಗಳೂರಿನಲ್ಲಿ ನಿನ್ನೆ ತಿಳಿಸಿದರು. ಈ ತೀರ್ಮಾನವನ್ನು ದೆಹಲಿಗೆ ಬೇಗ ತಿಳಿಸುವುದಾಗಿಯೂ, ಬಂದರಿನ ಅಡಳಿತಕ್ಕೆ ಸಮಿತಿ ರಚಿಸಲು ವ್ಯಕ್ತವಾಡುವದಾಗಿಯೂ ತಿಳಿಸಿದರು. ಬಂದರಿನ ಅಭಿವೃದ್ಧಿ ಕಾರ್ಯ ಪ್ರಗತಿದಾಯಕವಾಗಿ ನಡೆದಿಲ್ಲ ಎಂದ ಅವರು ನುಡಿದರು.

ಹೊಡೆತದಿಂದ ಮರಣ

ಉತ್ತರ ರೊಡೇಷಿಯಾದ ಬಾಂಕಾಕ್ರಾ ಪ್ಲೈನಲ್ಲಿ ಆಫ್ರಿಕ ರಾಷ್ಟ್ರೀಯ ಕಾಂಗ್ರೆಸ ಪಕ್ಷದ ರಾಜಕೀಯ ಪಥೆಯನ್ನು ಸಂಯುಕ್ತ ರಾಷ್ಟ್ರೀಯ ಸ್ವತಂತ್ರ ಪಕ್ಷ ಭಂಗ ಪಡಿಸಿದಾಗ ಓರ್ವ ಆಫ್ರಿಕನು ಹೊಡೆತದಿಂದ ಸತ್ತು, ಕೆಲವರು ಗಾಯಗೊಂಡಿರುವರು.

ಮುಸ್ಲಿಮರ ಪ್ರದರ್ಶನ

ಸರ್ಕಾರಿ ಭವನದ ಎದುರಿಗೆ ಯಾವ ವಿಧವಾದ ಪ್ರದರ್ಶನಗಳು ಕೂಡದೆಂಬ ನಿಶೇಧ ಆಜ್ಞೆಯನ್ನು ಭಂಗಮಾಡಿ, ಕಲ್ಕತ್ತಾದಲ್ಲಿ ನಿನ್ನೆ ಪ್ರಭುತ್ವ ಕಚೇರಿಯ ಎದುರು ಸುಮಾರು ಐನೂರು ಮುಸ್ಲಿಂ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು. ಮನೋಹರ ಕಹಾನಿಯಾ ಎಂಬ ಹೆಸರಿನ ಹಿಂದಿ ಪುಸ್ತಕದ ಪ್ರಕಟಣೆಯಿಂದ ಮುಸ್ಲಿಮರ ಮನೋಭಾವಕ್ಕೆ ನೋವಾಗಿದೆ ಎಂಬ ಕಾರಣದ ಮೇಲೆ ಈ ಪ್ರದರ್ಶನ. ಗ್ರಂಥಕರ್ತರು ಮತ್ತು ಪ್ರಕಟಣೆಗಾರರು ಆದ ಶ್ರೀ ಬಿ. ಸಿಂಗರನ್ನು ಬಂಧಿಸಬೇಕೆಂದು ಪ್ರದರ್ಶನಕಾರರು ಘೋಷಣೆಗಳನ್ನು ಕೂಗಿದರು. ನಿಶೇಧಾಜ್ಞೆಯನ್ನು ಭಂಗಮಾಡಿದ್ದಕ್ಕೆ ಪೋಲೀಸರು ಹತ್ತು ಜನರನ್ನು ಬಂಧಿಸಿರುವರು.

ಮಂತ್ರಿಮಂಡಲ ಸಮಸ್ಯೆ

ಮೈಸೂರು ಮಂತ್ರಿಮಂಡಲ ಸಮಸ್ಯೆಯನ್ನು ಕುರಿತು ಬೆಂಗಳೂರಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಸಮಾಲೋಚನೆ ಮಾಡುವಂತೆ ಶ್ರೀ ಎಸ್ ನಿಜಲಿಂಗಪ್ಪನವರು ನಾಯಕರಾಗಿ ಪ್ರವೇಶಿಸುವವರೆಗೆ ಮಂತ್ರಿಮಂಡಲ ವಿಸ್ತರಣೆ ವಿಚಾರವನ್ನು ಮುಂದೂಡಬೇಕೆಂದು ಅವರ ಗುಂಪಿನವರು ಅಭಿಪ್ರಾಯವನ್ನು ಹೊಂದಿರುವರು

ಪಕ್ಷಿಗಳ ಬಂಧನ

ಒಂದು ಜಾತಿಯ ಕಾಗೆಗಳು ಇತಿಹಾಸ ಪ್ರಸಿದ್ಧ ಟವರ್ ಆಫ್ ಲಂಡನ್ ಕಾವಲುಗಾರರು. ದಂತಕತೆಯ ಪ್ರಕಾರ ಅವು ಹೋದರೆ ಕಿರೀಟದ ಪತನ ಆಗುವುದು ಟವರ್‌ನ್ನು ಹೊಸದಾಗಿ ಹಾಕಿದೊಡನೆ ಪಕ್ಷಿಗಳು ಅದಕ್ಕೋಸ್ಕರ ಇಟ್ಟಿರುವ ಬೀಜಗಳನ್ನು ತಿನ್ನುವುದೆಂಬ ಭಯದಿಂದ ತೋಟಗಾರರು ಕೊಡಲು, ನಿನ್ನೆಯಿಂದ 14 ದಿನಗಳ ವರೆಗೆ ಅವನ್ನು ಟವರ್‌ನಲ್ಲಿ ಬಂಧಿಸಿಟ್ಟಿದೆ.

ಸಾಧು ಸಮ್ಮೇಳನ

ಪೂರ್ಣ ಕುಂಭ ಮೇಳ ಸಂದರ್ಭದಲ್ಲಿ ಈ ಮಾಹೆ 12 ನೆಯ ತಾ|| ಹರಿದ್ವಾರದಲ್ಲಿ ಸಾಧು ಸಮ್ಮೇಳನವೊಂದು ನಡೆಯುವುದು

ಯುದ್ಧ ಹೂಡುವೆವು

ಜಕಾರ್ತಾದಲ್ಲಿ ನಿನ್ನೆ ನಿಮಾನಬಲದ ದಿನಾಚರಣೆಯಲ್ಲಿ ಇಂಡೋನೇಷ್ಯ ಅಧ್ಯಕ್ಷ ಡಾ|| ಸುಕಾರ್ನೋರವರು ಮಾತನಾಡಿ ಇನ್ನು 8 ತಿಂಗಳಲ್ಲಿ ಪಶ್ಚಿಮ ಇರಿಯನ್‌ನನ್ನು ಡಚ್ಚರು ಬಿಡದಿದ್ದರೆ ಇಂಡೋನೇಷಿಯಾ ಯುದ್ಧ ಮಾಡುವದೆಂದು ತಿಳಿಸಿದರು.

ಕೊನೆಯ ಆಜ್ಞೆ

ಸಾದಾ ಕಾಗದದ ಮೇಲೆ ಬರೆದು ಪಾವತಿ ಕೊಟ್ಟಿದ್ದಕ್ಕಾಗಿ ಓರ್ವ ಪಟೇಲರಿಗೆ 50 ರೂಪಾಯಿ ದಂಡವನ್ನು ಹಾಕಲಾಯಿತು ಓರ್ವ ಶಾಲಾ ಶಿಕ್ಷಕರ ಒಂದು ಬಡ್ತಿಯನ್ನು ಶಾಶ್ವತವಾಗಿ ತಡೆ ಹಿಡಿಯಬೇಕೆಂದು ಆಜ್ಞೆ ಮಾಡಲಾಗಿದೆ ಎಂದ ಬೆಂಗಳೂರಿನಲ್ಲಿನ ಲಾಫ್ ನಿರೋದ ಎತ್ತು ಟೆಕ್ನಿಕಲ್ ಆಡಿಟ್ ಕಚೇರಿಯ ಡೈರೆಕ್ಟರರು ಈ ವೇಲೆ ಕಾಣಿಸಿದ ಪ್ರಕರಣಗಳಲ್ಲಿ ಕೊನೆಯ ಆಜ್ಞೆ ಒಂದಿದೆ ಎಂದು ತಿಳಿಸಿರುತ್ತಾರೆ.

ಹಾಗೆ ಒಪ್ಪಿಗೆ ಇಲ್ಲ

ಅಂತರರಾಷ್ಟ್ರೀಯ ವಾಣಿಜ್ಯ ಪಾತ್ರೆ ತಗೆ ಬೇಡವೆಂದು ಶ್ರೀ ಮನುಭಾಯಿವರು ನಿನ್ನೆ ಪ್ರಧಾನಿ ನೆಹರೂರವರಿಗೆ ತಿಳಿಸಿದರೆಂದು ದೆಹಲಿ ವಾರ್ತೆ ತಿಳಿಸುತ್ತದೆ.

ಮತ್ತೋರ್ವರ ನೇಮಕ

ಕಾರ್ಮಿಕ ಹಾಗೂ ಉದ್ಯೋಗ, ಇ ಖಾತೆಗೆ ಮಿನಿಸ್ಟರ್ ಆಫ್ ಸ್ಟೇಟ್ ನೇಮಕವಾಗುವರೆಂದು ಮಂತ್ರಿಮಂಡಲದ ಕಾರ್ಯದರ್ಶಿ ಶ್ರೀ ಎಸ್ ಸಹಾಯರು ನಿನ್ನೆ ನವದೆಹಲಿಯಲ್ಲಿ ತಿಳಿಸಿದರು

ಖಂಡನೆ

ಮಾರ್ಚ್ 16 ನೆಯ ತಾ|| ಲೀಕ್ ಟಿಬೇರಿಯಾಸ್‌ನಲ್ಲಿ ಸಿರಿಯಾ ಪ್ರದೇಶಗಳ ಮೇಲೆ ಇಸ್ರೇಲು ಆಕ್ರಮಣ ಮಾಡಿದ ಬಗ್ಗೆ ವಿಶ್ವಭದ್ರತಾ ಸಮಿತಿ ನಿನ್ನೆ ಖಂಡಿಸಿತು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

11 ಸಪ್ತಮಿ ಆದರ್ಶ

ಲಂಚನಿರತ ಅಧಿಕಾರಿಯೊಬ್ಬರ ವಜಾ

ಉಕ್ಕು, ಗಣಿಗಳು ಮತ್ತು ಇಂಧನ ಮಂತ್ರಿಶಾಖೆಯ ಗಣಿಗಳು ಮತ್ತು ಇಂಧನ ವಿಭಾಗದಲ್ಲಿನ ಅಸಿಸ್ಟೆಂಟು ಒಬ್ಬನನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂದು ನವ ದೆಹಲಿ ವಾರ್ತೆ. ತಮ್ಮ ಕರ್ತವ್ಯ ನಿರ್ವಹಣೆಯ ಸಮಯದಲ್ಲಿ ಸಂಸ್ಥೆಯೊಂದರ ಪ್ರತಿನಿಧಿಯೊಬ್ಬರಿಂದ ಅಕ್ರಮ ಸಂಭಾವನೆ ಪಡೆದರೆಂದು ಆ ಅಧಿಕಾರಿಯ ಮೇಲೆ ಆರೋಪ ಹೊರಿಸಲಾಗಿದೆ.

ಸಚಿವೆಯರ ನುಡಿಗಳು

ಮೈಸೂರು 9— ಸಚಿವೆ ಶ್ರೀಮತಿ ಯಶೋಧರಾ ದಾಸಪ್ಪನವರು ಮೈಸೂರು ತಾಲ್ಲೂಕು ಗಾವುಪಂಚಾಯಿತಿ ಅಧ್ಯಕ್ಷರುಗಳು ವಿಶ್ವ ತಾಲ್ಲೋಕ್ಯ ಬೋರ್ಡ ಪಡಸ್ಯಾಂ ಸಮ್ಮೇಳನವನ್ನು ಉದ್ಘಾಟಿಸಿ ತಾ:— ಮೊದಲು ಹಳ್ಳಿಗಳ ಉತ್ಪತ್ತಿಯನ್ನು ಹೆಚ್ಚಿಸಿ ನಂತರ ಅವರ ಜೀವನದಲ್ಲಿ ಸುಧಾರಣೆಗಳನ್ನು ಮಾಡಬೇಕೆಂದೂ ಅದಿಲ್ಲದೆ ಅವರಿಗೆ ಜೀವನ ಸುಧಾರಣೆ ಬಗ್ಗೆ ಬರೀ ಉಪದೇಶ ನೀಡುವುದರಲ್ಲಿ ಅರ್ಥವಿಲ್ಲವೆಂದು ನುಡಿದರು; ಅವರು ಮುಂದುವರಿದು, ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಇಂದು ಶೈಶವಾವಸ್ಥೆಯಲ್ಲಿದ್ದು, ಪ್ರಗತಿಯ ಹಾದಿಯಲ್ಲಿ ಹಲವು ನ್ಯೂನತೆಗಳಿದ್ದರೂ, ಇತರ ಕಡೆಗಳಿಗೆ ಹೋಲಿಸಿದರೆ ನಮ್ಮದು ಖಂಡಿತವಾಗಿಯೂ ರಾಮರಾಜ್ಯವೆಂದು ಹೇಳಿಕೊಳ್ಳಬಹುದೆಂದು ತಿಳಿಸಿದರು; ಪಂಚಾಯತಿ ರಾಜ್ಯದಲ್ಲಿ ಮಹಿಳೆಯರ ಪಾತ್ರ ಬಹುವಿಧವೆಂದ ಹೇಳಿ ಗ್ರಾಮಪಂಚಾಯತಿ ಕೆಲಸಗಳಿಗೆ ಉತ್ತೇಜನ ನೀಡಬೇಕೆಂದರು — ಸಚಿವೆಯವರು ಬೆಳಿಗ್ಗೆ ರಾತ್ರಿ ಕೊಳ್ಳೇಗಾಲದ ಹರಿಜನ ವಿದ್ಯಾರ್ಥಿನಿಲಯದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿನಿಲಯಗಳೇ ದೇವಸ್ಥಾನಗಳಿಂದೂ, ದೇವಾಲಯಗಳನ್ನು ನಡೆಸುವ ಪವಿತ್ರತೆಯನ್ನೇ ವಿದ್ಯಾರ್ಥಿನಿಲಯಗಳನ್ನು ನಡೆಸುವುದಂಲ್ಲೂ ಜನ ಪರಿಸಬೇಕೆಂದೂ ಹೇಳಿದರು — ಸಚಿವೆಯವರು ಗೀತಾ ಶಿಕ್ಷಣವಿಭಾಗದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ, ನಮ್ಮ ಮಹಿಳೆಯರು ನವನಾಗರಿಕತೆಗೆ ಮಾರು ಹೋಗಿ ನಮ್ಮ ಘನ ಸಂಸ್ಕೃತಿಯನ್ನು ಮರೆತಿದ್ದಾರೆಂದು ಹೇಳಿ, ಪಾಶ್ಚಿಮಾತ್ಯರಿಂದ ಕಲಿಯಬೇಕಾದ್ದನ್ನು ಪೂರ್ತ ಕಲಿತು ನಮ್ಮ ಸಂಸ್ಕೃತಿಯನ್ನು ಮಾತ್ರ ಮರೆಯ ಬಾರದೆಂದು ಕರೆ ಇತ್ತರು.

★

ಮಕ್ಕಳು ಯಾರಿಗೂ ಹೆದರುವುದಿಲ್ಲ !

ಶಾಲಾಜೀವನದಲ್ಲಿ ಬೆಗುಸ್ಸೆ ಹೊಂದಿದ ಒಬ್ಬ ಅಧ್ಯಾಪಕನು, ರಾಜೀನಾಮೆ ಕಳಿಸುತ್ತಾ ಹೀಗೆ ಬರೆದನಂತೆ— 'ಶಾಲೆಗಳಿಗೆ ಇಂದಿನ ದಿನಗಳಲ್ಲಿ ಅಧ್ಯಾಪಕರನ್ನು ಹೆಡ್ಮಾಸ್ಟರಿಗೆ ಹೆದರುತ್ತಾನೆ: ಹೆಡ್ಮಾಸ್ಟರು ಮೆನೇಜರಿಗೆ ಹೆದರುತ್ತಾನೆ; ಮೆನೇಜರು ಮೆನೇಜಿಂಗು ಬೋರ್ಡಿಗೆ ಹೆದರುತ್ತಾನೆ: ಮೆನೇಜಿಂಗು ಬೋರ್ಡು ಮಕ್ಕಳ ಪೆತ್ತವರಿಗೆ ಹೆದರುತ್ತಿದೆ; ಮಕ್ಕಳ ಪೆತ್ತವರು ತಮ್ಮ ಮಕ್ಕಳಿಗೇ ಹೆದರುತ್ತಾರೆ: ಮಕ್ಕಳು ಯಾರಿಗೂ ಹೆದರುವುದಿಲ್ಲ'.

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ

ಪ್ರಕಟಣೆ

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ ಹೆಲ್ತ್ ಸೆಕ್ಷನ್ ಟ್ರೇಡ್ ಲೈಸೆನ್ಸ್‌ದಾರರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ಮುನಿಸಿಪಲ್ ಬೈಲಾ ಛಾಪ್ಟರ್ (chapter) 16 ರೂಲು 3 ರ ಪ್ರಕಾರ ಹೆಲ್ತ್ ಸೆಕ್ಷನ್ನಿಗೆ ಸಂಬಂಧಪಟ್ಟ ಲೈಸೆನ್ಸ್‌ಗಳನ್ನು 1962–63 ನೇ ಸಾಲಿಗೆ ರನ್ನೂ ಮಾಡಿಸಿಕೊಳ್ಳಲು ತಾ || 15–4–1962 ರವರೆಗೆ ಹಾಲಿ ಜಾರಿಯಲ್ಲಿರುವ ಅಪ್ತಿಕೇಷನ್ ಫಾರಮ್‌ದಲ್ಲಿ ನಿಗದಿಯಾದ ಲೈಸೆನ್ಸು ಫೀಯನ್ನು ಮುನಿಸಿಪಲ್ ಟ್ರೆಜರಿಗೆ ಕಟ್ಟಿ ಸಂಬಂಧಪಟ್ಟ ಚಲ್ತ ಮತ್ತು ಹಳೇ ಲೈಸೆನ್ಸುಗಳೊಡನೆ ಈ ಆಫೀಸಿಗೆ ಹಾಜರ್ ಪಡಿಸಿ ತಮ್ಮ ಲೈಸನ್ಸುಗಳನ್ನು ರನ್ನೂ ಮಾಡಿಸಿಕೊಳ್ಳುವುದು : ತಪ್ಪಿದಲ್ಲಿ ಖಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುವುದು.

ಸಿ. ಆರ್. ಬಾಲಸುಬ್ರಹ್ಮಣ್ಯ
29–3–62 ಹೆಲ್ತ್ ಆಫೀಸರ್
ಸಿಟಿ ಮುನಿಸಿಪಲ್ ಆಫೀಸರ್, ಮೈಸೂರು.

ವುಡ್‌ಲ್ಯಾಂಡ್ಸ್ ಮಹೋನ್ನತ 9 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ ಎಸ್ ಎಸ್ ರಾಜೇಂದ್ರನ್

ಸಾವಿತ್ರಿ, ಎಂ ವಿ ರಾಜಮ್ಮ, ಸಂಧ್ಯಾ, ಮುತ್ತುಲಕ್ಷ್ಮಿ

[ದಿನವಹಿ 3 ಛಿಟಗಳು]

Help The 'Gorakshana'

Advertise in Goraksana and help the pious cause

SHAKTI SUDHA

A Superb Tonic

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

ಗೋರಕ್ಷಣ ಪತ್ರಿಕೆಗೆ ಸಹಾಯಾರ್ಥವಾಗಿ ಮುದ್ರಿಸಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.